All India Radio: Bangalore
National Bulletin In Kannada
17.08.2026  19.35 hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು
17.08.2026  19.35  hrs

---

ಮುಖ್ಯಾಂಶಗಳು

- ಸ್ವಾತಂತ್ರ್ಯ ದಿನದ ಮುನ್ನವೇ, ದೇಶದ ರಕ್ಷಣಾ ಪಡೆಗಳಿಂದ ಐಎಸ್ಐ ಬೆಂಬಲಿತ ಉಗ್ರಗಾಮಿ ಗುಂಪು– ಶಹಜಾದ್ ಭಟ್ಟಿ ಕಾರ್ಯಜಾಲ ಧ್ವಂಸ – ಕೇಂದ್ರ ಗೃಹ ಸಚಿವ ಅಮಿತ್ ಶಾ
- ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಜೊತೆ ಶಿಕ್ಷಣ ಸಚಿವ ಪ್ರಲ್ಹಾದ್ ಜೋಶಿ ಸಭೆ; ಸ್ಥಾಪಿತ ಪರೀಕ್ಷಾ ಶಿಷ್ಟಾಚಾರಗಳ ಕಟ್ಟುನಿಟ್ಟಿನ ಪಾಲನೆಗೆ ಆದೇಶ
- ಬಿಜೆಪಿಯಿಂದ ರಾಷ್ಟ್ರೀಯ ಪದಾಧಿಕಾರಿಗಳ ಘೋಷಣೆ; ಪಕ್ಷದ ಧುರೀಣ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರಿಂದ ಅಭಿನಂದನೆ
- ವಿದ್ಯುನ್ಮಾನ ಘಟಕ ತಯಾರಿಕಾ ಯೋಜನೆಯಡಿ 7 ಸಾವಿರದ 877 ಕೋಟಿ ರೂಪಾಯಿ ಬಂಡವಾಳ ಹೂಡಿಕೆಗೆ ಅನುಮೋದನೆ – ಅಶ್ವಿನಿ ವೈಷ್ಣವ್
- ಬಿಡಬ್ಲ್ಯೂಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್; ಭಾರತೀಯ ಕ್ರೀಡಾಪಟುಗಳ ಶುಭಾರಂಭ

---

ಸ್ವಾತಂತ್ರ್ಯ ದಿನದ ಮುನ್ನವೇ, ದೇಶದ ರಕ್ಷಣಾ ಪಡೆಗಳು ಐಎಸ್ಐ ಬೆಂಬಲಿತ ಉಗ್ರಗಾಮಿ ಗುಂಪು– ಶಹಜಾದ್ ಭಟ್ಟಿ ಕಾರ್ಯಜಾಲವನ್ನು ಧ್ವಂಸಗೊಳಿಸಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

200ಕ್ಕೂ ಅಧಿಕ ಕಾರ್ಯನಿರ್ವಾಹಕರನ್ನು ವಶಕ್ಕೆ ಪಡೆಯುವ ಮೂಲಕ ಸರ್ಕಾರ ವಿಚ್ಛಿದ್ರಕಾರಿ ಆಕ್ರಮಣವನ್ನು ವಿಫಲಗೊಳಿಸಲಾಗಿದೆ ಎಂದು ಗೃಹ ಸಚಿವರು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿದ್ದಾರೆ.

ಭದ್ರತಾ ಪಡೆಗಳು 14 ರಾಜ್ಯಗಳ ವಿವಿಧ ತಾಣಗಳಲ್ಲಿ ಸಮನ್ವಯದ ಕಾರ್ಯಾಚರಣೆ ನಡೆಸುವ ಮೂಲಕ ಭಯೋತ್ಪಾದಕತೆ ವಿರುದ್ಧ ಶೂನ್ಯ ಸಹನೆಯನ್ನು ಅತ್ಯುತ್ತಮವಾಗಿ ಪ್ರದರ್ಶಿಸಿದ್ದಾರೆ. ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಐಇಡಿ, ಪಾಕಿಸ್ತಾನ ಶಸ್ತ್ರಾಸ್ತ್ರ ಕಾರ್ಖಾನೆಗಳ ಗುರುತು ಇರುವ ಗ್ರೆನೇಡ್, ಪಿಸ್ತೂಲ್, ಸಜೀವ ಕಾಟ್ರಿಜ್, ಸಿಸಿ ಟಿವಿ ಕ್ಯಾಮರಾ ಮೊದಲಾದವುಗಳನ್ನು ವಶಪಡಿಸಿಕೊಳ್ಳಲಾಗಿದೆ. ಶಹಜಾದ್ ಭಟ್ಟಿ ಕಾರ್ಯಜಾಲ ವಿವಿಧ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿತ್ತು ಎಂದು ಅಮಿತ್ ಶಾ ತಿಳಿಸಿದ್ದಾರೆ.

---

ಕೇಂದ್ರ ಶಿಕ್ಷಣ ಸಿಚಿವ ಪ್ರಲ್ಹಾದ್ ಜೋಶಿ ನವದೆಹಲಿಯಲ್ಲಿಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ–ಎನ್‌ಟಿಎ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಸ್ಥಾಪಿತ ಪರೀಕ್ಷಾ ಶಿಷ್ಟಾಚಾರಗಳನ್ನು ಕಟ್ಟುನಿಟ್ಟಾಗಿ ಅನುಪಾಲನೆ ಮಾಡುವಂತೆ ಸಚಿವರು ಈ ಸಂದರ್ಭದಲ್ಲಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗೌಪ್ಯ ಕಾರ್ಯಾಚರಣೆ ವಿನ್ಯಾಸ, ಪ್ರತ್ಯೇಕತಾ ಕೊಠಡಿ ಸೇರಿದಂತೆ ಎಲ್ಲ ನವೀಕರಣ ಪ್ರಕ್ರಿಯೆಗಳನ್ನು ಸಮರೋಪಾದಿಯಲ್ಲಿ ಪೂರ್ತಿಗೊಳಿಸಿ ಅನುಷ್ಠಾನಗೊಳಿಸಬೇಕೆಂದು ಸೂಚಿಸಿದರು. ಎಲ್ಲ ಪರೀಕ್ಷಾ ಪ್ರಕ್ರಿಯೆಗಳ ಪರಿಪೂರ್ಣ ಪರಿಶೋಧನೆ ನಡೆಸಿ, ಸರಿಪಡಿಸಲು ಕೈಗೊಳ್ಳಲಾದ ಕ್ರಮಗಳ ಬಗ್ಗೆ ವರದಿ ಸಲ್ಲಿಸಲು ಎನ್‌ಟಿಎಗೆ ಸಚಿವರು ನಿರ್ದೇಶಿಸಿದರು. ಸಂಪೂರ್ಣ ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಎನ್‌ಟಿಎ ಕೈಗೊಂಡ ಕ್ರಮಗಳನ್ನು ಅಧಿಕಾರಿಗಳು ಸಚಿವರಿಗೆ ವಿವರಿಸಿದರು.

50ಕ್ಕೂ ಹೆಚ್ಚು ಸಿಬ್ಬಂದಿಯನ್ನು ಎನ್‌ಟಿಎದಿಂದ ತೆಗೆದು ಹಾಕಲಾಗಿದೆ. ವೃತ್ತಿಪರ ನಾಯಕತ್ವದ 10 ಸ್ಥಾನಗಳಿಗಾಗಿ ಜಾಹೀರಾತು ಹೊರಡಿಸಲಾಗಿದ್ದು, ಸದ್ಯದಲ್ಲಿ ಭರ್ತಿ ಪ್ರಕ್ರಿಯೆ ನಡೆಯಲಿದೆ. ಸೈಬರ್ ಭದ್ರತೆ, ಪ್ರಶ್ನೆಪತ್ರಿಕೆ ವಿನ್ಯಾಸ ಹಾಗೂ ಇತರ ವಿಶೇಷ ವಲಯಗಳಿಗೆ ಸಂಬಂಧಿಸಿದಂತೆ ಖಾಸಗಿ ಕ್ಷೇತ್ರದ ವಿಷಯ ತಜ್ಞರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ಹಾಗೂ ಎನ್‌ಟಿಎ ಮಹಾನಿರ್ದೇಶಕರು ಹಾಗೂ ಇತರ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

---

ಭಾರತೀಯ ಜನತಾ ಪಾರ್ಟಿ–ಬಿಜೆಪಿ, ಹೊಸ ರಾಷ್ಟ್ರೀಯ ಪದಾಧಿಕಾರಿಗಳ ತಂಡ ಪ್ರಕಟಿಸಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಹೊಸ ತಂಡದ ಸದಸ್ಯರ ಹೆಸರುಗಳನ್ನು ಘೋಷಿಸಿದ್ದಾರೆ.

ವಸುಂಧರಾ ರಾಜೆ ಸಿಂಧಿಯಾ, ತಿರತ್ ಸಿಂಗ್ ರಾವತ್, ರಾಮ್ ಮಾಧವ್, ಬೈಜಯಂತ್ ಜೆ ಪಾಂಡಾ, ಸರ್ದಾರ್ ಮನ್‌ಪ್ರೀತ್ ಸಿಂಗ್ ಬಾದಲ್ ಮತ್ತು ರೇಖಾ ವರ್ಮಾ ಸೇರಿದಂತೆ ಒಟ್ಟು 13 ರಾಷ್ಟ್ರೀಯ ಉಪಾಧ್ಯಕ್ಷರನ್ನು ನೇಮಿಸಲಾಗಿದೆ. ಕೇಂದ್ರ ಸಚಿವ ಹಾಗೂ ಬಿಜೆಪಿ ನಾಯಕ ಪಿಯೂಶ್ ಗೋಯಲ್ ರಾಷ್ಟ್ರೀಯ ಖಜಾಂಚಿಯಾಗಿದ್ದಾರೆ.

ಬಿ.ಎಲ್.ಸಂತೋಷ್ ಅವರನ್ನು ಸಂಘಟನಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ವಿನೋದ್ ತಾವಡೆ, ಸುನಿಲ್ ಬನ್‌ಸಾಲ್, ಸ್ಮೃತಿ ಇರಾನಿ, ಬಿಪ್‌ಲಬ್ ಕುಮಾರ್ ದೇಬ್ ಸೇರಿದಂತೆ 8 ಜನ ಧುರೀಣರನ್ನು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾಗಿ ನೇಮಿಸಲಾಗಿದೆ. ಪಕ್ಷದ ವಿವಿಧ ಮೋರ್ಚಾಗಳಿಗಾಗಿ ಹೊಸ ಮುಖ್ಯಸ್ಥರನ್ನು ಪ್ರಕಟಿಸಲಾಗಿದೆ.

ಯುವ ಮೋರ್ಚಾ ಅಧ್ಯಕ್ಷರಾಗಿ ಡಾ.ಹೇಮಾಂಗ್ ಜೋಶಿ, ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ರೂಪ್ ಕುಮಾರಿ ಚೌಧರಿ ಹಾಗೂ ಕಿಸಾನ್ ಮೋರ್ಚಾ ಅಧ್ಯಕ್ಷರಾಗಿ ಬನ್ಸಿಲಾಲ್ ಗುರ್ಜಾರ್ ನೇಮಕಗೊಂಡಿದ್ದಾರೆ.

---

ಬಿಜೆಪಿ ಹಿರಿಯ ಧುರೀಣ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ, ಪಕ್ಷದ ರಾಷ್ಟ್ರೀಯ ಪದಾಧಿಕಾರಿ ಹುದ್ದೆಗಳಿಗಾಗಿ ಹೊಸದಾಗಿ ನೇಮಕಗೊಂಡವರನ್ನು ಅಭಿನಂದಿಸಿದ್ದಾರೆ.

ಹೊಸ ತಂಡ ಸಾಂಸ್ಥಿಕ ಅನುಭವವನ್ನು ಒಟ್ಟುಗೂಡಿಸಿ, ಹೊಸ ಶಕ್ತಿ ಹಾಗೂ ತಳಮಟ್ಟದ ಸಂಪರ್ಕವನ್ನು ತರಲಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಪಕ್ಷವನ್ನು ಬಲಪಡಿಸಲು ಹಾಗೂ ಸಾರ್ವಜನಿಕ ಸೇವೆಯತ್ತ ಗಮನ ಕೇಂದ್ರೀಕರಿಸುವ ಮೂಲಕ ಪದಾಧಿಕಾರಿಗಳು ಉತ್ತಮ ಕೊಡುಗೆ ನೀಡುವರೆಂದು ಪ್ರಧಾನಿ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

---

ಆಂಧ್ರಪ್ರದೇಶದ ವಿಜಿಯಾನಗರಂ ಜಿಲ್ಲೆಯಲ್ಲಿರುವ ಅಲ್ಲೂರಿ ಸೀತಾರಾಮರಾಜು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಇಂದು ತನ್ನ ವಾಣಿಜ್ಯ ಕಾರ್ಯಾಚರಣೆಗಳನ್ನು ಆರಂಭಿಸಿದೆ.

ನಾಗರಿಕ ವಿಮಾನಯಾನ ಖಾತೆ ಸಚಿವ ಕೆ.ರಾಮ್‌ಮೋಹನ್ ನಾಯ್ಡು ಸಮ್ಮುಖದಲ್ಲಿ ವಾಣಿಜ್ಯ ಕಾರ್ಯಾಚರಣೆ ಉದ್ಘಾಟನೆ ನೆರವೇರಿತು.

ಸುಮಾರು 3 ಸಾವಿರದ 800 ಮೀಟರ್ ರನ್‌ವೇ ಹೊಂದಿರುವ ಈ ವಿಮಾನ ನಿಲ್ದಾಣ, ಆರಂಭಿಕವಾಗಿ ವಾರ್ಷಿಕ 60 ಲಕ್ಷ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದೆ.

---

ದೇಶದಲ್ಲಿ 7 ಸಾವಿರದ 877 ಕೋಟಿ ರೂಪಾಯಿ ಬಂಡವಾಳ ಹೂಡಿಕೆಯ ಇನ್ನು 31 ಅರ್ಜಿಗಳಿಗೆ ವಿದ್ಯುನ್ಮಾನ ಘಟಕ ತಯಾರಿಕಾ ಯೋಜನೆಯಡಿ ಅನುಮೋದನೆ ನೀಡಲಾಗಿದೆ.

ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಅಶ್ವಿನಿ ವೈಷ್ಣವ್ ಸಾಮಾಜಿಕ ಜಾಲತಾಣದಲ್ಲಿ ಈ ವಿಷಯ ತಿಳಿಸಿದ್ದಾರೆ. ಒಟ್ಟು 10 ರಾಜ್ಯಗಳಿಂದ ಈ ಅರ್ಜಿಗಳು ಬಂದಿದ್ದು, ತಯಾರಿಕಾ ಘಟಕಗಳಿಂದ 9 ಸಾವಿರದ 500ಕ್ಕೂ ಅಧಿಕ ಉದ್ಯೋಗವಕಾಶಗಳು ಸೃಷ್ಟಿಯಾಗುವ ನಿರೀಕ್ಷೆ ಇದೆ ಎಂದು ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದ್ದಾರೆ.

---

ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯ ದಿನ ಭಾಷಣದಲ್ಲಿ ನೀಡಿದ ಶಕ್ತಿಯ ಸಪ್ತಧಾರ ಪರಿಕಲ್ಪನೆ ದೇಶದ ಗ್ರಾಮೀಣ ಮತ್ತು ಕೃಷಿ ವಲಯಕ್ಕೆ ದಿಕ್ಸೂಚಿಯಾಗಿದೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ಜನಕೇಂದ್ರೀತ ಕಾರ್ಯಕ್ರಮಗಳ ನಿರೂಪಣೆ ಹಾಗೂ ಪಾರದರ್ಶಕ ಪರಿಣಾಮಕಾರಿ ಜಾರಿ ಮೂಲಕ ಈ ದೂರದೃಷ್ಟಿಯನ್ನು ಸಾಕಾರಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.

ನಾಳೆ ನವದೆಹಲಿಯ ಪೂಸಾ ಆವರಣದಲ್ಲಿ ಆಯೋಜಿಸಲಾಗಿರುವ ಶಕ್ತಿಯ ಸಪ್ತಧಾರಾ ಸಂಕಲ್ಪ ಕಾರ್ಯಕ್ರಮ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದಲ್ಲಿ ನಡೆಯಲಿದೆ. 2047ರ ವೇಳೆಗೆ ರಾಷ್ಟ್ರವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿಸುವ ದಿಸೆಯಲ್ಲಿ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ವಲಯಕ್ಕಾಗಿ ಮಾರ್ಗ ನಕ್ಷೆ ರೂಪಿಸುವುದು ಈ ಸಭೆಯ ಉದ್ದೇಶವಾಗಿದೆ. ಪ್ರಗತಿಪರ ರೈತರು ಲಕ್‌ಪತಿ ದೀದಿಗಳು, ಕೃಷಿ ರಫ್ತುದಾರರು ಹಾಗೂ ಆಹಾರ ಸಂಸ್ಕರಣೆಯಲ್ಲಿ ತೊಡಗಿರುವವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

---

ಕೇಂದ್ರ ಸಿಬ್ಬಂದಿ ಸಾರ್ವಜನಿಕ ಕುಂದುಕೊರತೆ ನಿವಾರಣೆ ಹಾಗೂ ಪಿಂಚಣಿ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ನವದೆಹಲಿಯಲ್ಲಿಂದು 2026ನೇ ಸಾಲಿನ ಅನುಭವ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ಪಾಸ್‌ಪೋರ್ಟ್ ಸೇವಾ ಕೇಂದ್ರ, ಹೊಸ ನಿಯಮಾವಳಿಗಳ ನಿರೂಪಣೆ, ಆಡಳಿತ ಮತ್ತು ಖಾತೆ ನಿರ್ವಹಣೆಗಳಲ್ಲಿ ತಂತ್ರಜ್ಞಾನದ ಅಳವಡಿಕೆ ಮೊದಲಾದ ಸರ್ಕಾರಿ ಯೋಜನೆಗಳ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಿದ ಕಾರ್ಯಗಳಿಗಾಗಿ ಈ ಪುರಸ್ಕಾರಗಳನ್ನು ನೀಡಲಾಗಿದೆ. ಕೇಂದ್ರ ಸರ್ಕಾರಿ ನೌಕರರು ಸರ್ಕಾರಿ ಸ್ವಾಮ್ಯದ 12 ಬ್ಯಾಂಕುಗಳು ಹಾಗೂ ಉದ್ದಿಮೆಗಳ ನೌಕರರು ಹಾಗೂ ನಿವೃತ್ತ ನೌಕರರಿಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಅನುಭವ ವೇದಿಕೆ ರೂಪಿಸಲಾಗಿದೆ

ಇದೇ ಸಂದರ್ಭದಲ್ಲಿ ಸಚಿವರು, ಪಿಂಚಣಿ ಮಿತ್ರ ಕೈಪಿಡಿ ಹಾಗೂ ರಾಷ್ಟ್ರವ್ಯಾಪಿ ಡಿಜಿಟಲ್ ಜೀವಿತ ಪ್ರಮಾಣ ಪತ್ರ ಆಂದೋಲನ–5 ನಿಯಮಾವಳಿಗಳನ್ನು ಬಿಡುಗಡೆ ಮಾಡಿದರು.

---

ನವದೆಹಲಿಯಲ್ಲಿಂದು ಆರಂಭವಾದ ಬಿಡಬ್ಲ್ಯೂಎಫ್ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಕ್ರೀಡಾಪಟುಗಳು ಮುನ್ನಡೆ ಸಾಧಿಸಿದ್ದಾರೆ. ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ.ಸಿಂಧು, ಮಾಜಿ ವಿಶ್ವಚಾಂಪಿಯನ್ ಐರ್ಲೆಂಡ್‌ನ ಸೋಫಿಯಾನ್ ನೋಬೆಲ್ ಅವರನ್ನು 21–7, 21–11 ನೇರ ಸೆಟ್‌ಗಳಿಂದ ಪರಾಭವಗೊಳಿಸಿದರು.

ಮಹಿಳೆಯರ ಡಬಲ್ಸ್‌ನಲ್ಲೂ ಕೂಡ ತ್ರೀಸಾ ಜೋಲಿ ಮತ್ತು ಗಾಯಿತ್ರಿ ಗೋಪಿಚಂದ್ ಎರಡನೇ ಸುತ್ತು ಪ್ರವೇಶಿಸಿದ್ದಾರೆ.

ಇದಕ್ಕೂ ಮುನ್ನ ನಡೆದ ಪುರುಷರ ಡಬಲ್ಸ್‌ನಲ್ಲಿ ಎಂ.ಆರ್.ಅರ್ಜುನ್ ಮತ್ತು ಹರಿಹರನ್ ಅಮ್‌ಸಕರುಣನ್ ಎರಡನೇ ಸುತ್ತು ಪ್ರವೇಶಿಸಿದ್ದಾರೆ.

---

ಶ್ರೀಲಂಕಾದ ಗಾಲೆಯಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್ ಕ್ರಿಕೆಟ್‌ನ ಮೂರನೇ ದಿನವಾದ ಇಂದು ಭಾರತದ ಬೌಲರ್‌ಗಳು ಶ್ರೀಲಂಕಾ ತಂಡವನ್ನು ಮೊದಲ ಇನ್ನಿಂಗ್ಸ್‌ನಲ್ಲಿ 284 ರನ್‌ಗಳಿಗೆ ಕಟ್ಟಿ ಹಾಕುವಲ್ಲಿ ಯಶಸ್ವಿಯಾಗಿದ್ದಾರೆ. ಇದರಿಂದಾಗಿ ಭಾರತ ತಂಡ ಮೊದಲ ಇನ್ನಿಂಗ್ಸ್ ಆಧಾರದ ಮೇಲೆ 178 ರನ್‌ಗಳ ಮುನ್ನಡೆ ಪಡೆದಿದೆ.

---

ಮುಂಬರುವ 2027ರ ಜನಗಣತಿ ಅಂಗವಾಗಿ ಜಮ್ಮು ಮತ್ತು ಕಾಶ್ಮೀರದ ಹಿಮಾವೃತ ಪ್ರದೇಶಗಳಲ್ಲಿ ಇಂದು ಡಿಜಿಟಲ್ ಸ್ವಗಣತಿ ಪ್ರಕ್ರಿಯೆ ಆರಂಭವಾಯಿತು.

ಜಮ್ಮು, ಶ್ರೀನಗರ, ಸಾಂಬಾ ಮತ್ತು ರಜೌರಿ ಹೊರತುಪಡಿಸಿ ಜಮ್ಮು-ಕಾಶ್ಮೀರದ 16 ಜಿಲ್ಲೆಗಳಲ್ಲಿ ಈ ಪ್ರಕ್ರಿಯೆ ಆರಂಭಿಸಲಾಗಿದೆ. ಎಂದು ಜಮ್ಮು-ಕಾಶ್ಮೀರ್ ಮತ್ತು ಲಡಾಖ್‌ನ ಮುಖ್ಯ ಪ್ರಧಾನ ಜನಗಣತಿ ಅಧಿಕಾರಿ ಅಮಿತ್ ಶರ್ಮಾ ತಿಳಿಸಿದ್ದಾರೆ.

__________ ಮುಕ್ತಾಯ __________